# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಲಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 196 | Pages. 2 | Date: 15-07-2026, WEDNESDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 196 – ಪುಟಗಳು : 2 | 15-07-2026 ಬುಧವಾರ | Ph: 8762954248 | ದರ : ₹1


# ಎನ್ಯೂಮರೇಷನ್ ನಮೂನೆ ವಾಪಸ್ ಕೊಡಿ

## ಜಿಲ್ಲೆಯ ಮತದಾರರಿಗೆ ಡಿಸಿ ಲತಾಕುಮಾರಿ ಮನವಿ | ಶೇ. 48ರಷ್ಟು ಡಿಜಿಟಲೀಕರಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ಜು.29ರ ವರೆಗೆ ನಡೆಯಲಿದ್ದು ಮತದಾರರು ಸ್ವೀಕರಿಸಿರುವ ಎನ್ಯೂಮರೇಷನ್ ನಮೂನೆಗಳನ್ನು ಭರ್ತಿ ಮಾಡಿ ಮತಗಟ್ಟೆ ಅಧಿಕಾರಿಗಳಿಗೆ ವಾಪಸ್ ನೀಡಬೇಕು ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಕೋರಿದರು.

ಜಿಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,

ಜಿಲ್ಲೆಯಲ್ಲಿ ಈ ವರೆಗೆ ಶೇ.98 ರಷ್ಟು ಎನ್ಯೂಮೆರೇಷನ್ ನಮೂನೆ ವಿತರಣೆ ಮಾಡಲಾಗಿದೆ. ಮತದಾರರಿಂದ ಭರ್ತಿ ಮಾಡಿದ ಎನ್ಯೂಮೆರೇಷನ್ ನಮೂನೆಗಳನ್ನು ಸ್ವೀಕರಿಸಿ ಶೇ.48 ರಷ್ಟು ಡಿಜಿಟಲಿಕರಣ ಮಾಡಲಾಗಿದೆ. ಈ ಪ್ರಕ್ರಿಯೆ ಪ್ರಾರಂಭಕ್ಕೂ ಮುನ್ನ ಪೂರ್ವ ತಯಾರಿ ಮಾಡಿಕೊಳ್ಳಲಾಗಿದೆ. ಈಗಾಗಲೇ ಮತದಾರರ ಪಟ್ಟಿಯಲ್ಲಿರುವವರಿಗೆ ಮಾತ್ರ ಪೂರ್ವ ಮುದ್ರಿತ ಗಣತಿ ನಮೂನೆಗಳು ಬಂದಿದೆ ಎಂದರು.

ಎನ್ಯೂಮೆರೇಷನ್ ನಮೂನೆಗಳಲ್ಲಿ ಮತದಾರರ ಹೆಸರು ಮೊದಲೆ ಮುದ್ರಿತವಾಗಿರುತ್ತದೆ. ಮತದಾರರು ಭರ್ತಿ ಮಾಡಲು ಯಾವುದೇ ಗೊಂದಲ ಮಾಡಿಕೊಳ್ಳದೆ 2002 ರಲ್ಲಿ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇಲ್ಲದಿದ್ದರೂ ತಂದೆ, ತಾಯಿ ಹೆಸರು ಅಥವಾ ಮದುವೆ ಆಗಿದ್ದಲ್ಲಿ ಗಂಡನ ಹೆಸರು ಇರುತ್ತದೆ. ಅವರ ಹೆಸರು ನಮೂದಿಸಿ ಸಂಬಂಧ ಏನು ಎಂಬ ಸ್ಥಳದಲ್ಲಿ ಭರ್ತಿ ಮಾಡಬೇಕು. ವಿಧಾನ ಸಭಾ ಕ್ಷೇತ್ರದ ಹೆಸರು, ಭಾಗ




> ಎಸ್‌ಐಆರ್ ಪ್ರಕ್ರಿಯೆ ಅಂಗವಾಗಿ ಜಿಲ್ಲೆಯಲ್ಲಿ ಇದುವರೆಗೆ 15092 ಸಂಗ್ರಹಿಸಲಾಗದ ಗಣತಿ ನಮೂನೆಗಳು ಎಂದು ಗುರುತಿಸಲಾಗಿದ್ದು, ಈ ಪೈಕಿ 9149 ಮರಣ ಹೊಂದಿರುವ, 4404 ಶಾಶ್ವತ ವಲಸೆ, 1244 ಪುನರಾವರ್ತನೆ, 247 ಗೈರು ಮತದಾರರು ಮತ್ತು 48 ಇತರೆ ಕಾರಣಗಳೆಂದು ಪರಿಗಣಿಸಲಾಗಿದೆ.
>
> **– ಕೆ.ಎಸ್.ಲತಾಕುಮಾರಿ, ಜಿಲ್ಲಾಧಿಕಾರಿ**

ಸಂಖ್ಯೆ, (ಎಪಿಕ್ ಕಾರ್ಡ್ ಸಂಖ್ಯೆ ಲಭ್ಯವಿದ್ದಲ್ಲಿ) ನಮೂದಿಸಬೇಕು. ಉಳಿದಂತೆ ತಮ್ಮ ಜನ್ಮ ದಿನಾಂಕ, ಆಧಾರ್ ಸಂಖ್ಯೆ, ಫೋನ್ ನಂಬರ್ ದಾಖಲಿಸಿ ನಂತರ ಕಡ್ಡಾಯವಾಗಿ ಸಹಿ ಮಾಡಿ ಒಂದು ಪ್ರತಿಯನ್ನು ತಮ್ಮ ಬಳಿ ಇಟ್ಟುಕೊಳ್ಳಬೇಕು. ಮತ್ತೊಂದು ಪ್ರತಿಯನ್ನು ಮತಗಟ್ಟೆ ಅಧಿಕಾರಿಗಳಿಗೆ ನೀಡಿ ಸಹಕರಿಸುವಂತೆ ಮನವಿ ಮಾಡಿದರು.

### ಜು.17 ರಂದು ದತ್ತು ಸ್ವೀಕಾರ ಜಾಗೃತಿ

ಜಿಲ್ಲಾಡಳಿತ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ವಿವಿಧ ಸ್ವಯಂ ಸೇವಾ ಸಂಘಟನೆಗಳ ಸಹಯೋಗದೊಂದಿಗೆ ಕಾನೂನುಬದ್ಧ ದತ್ತು ಸ್ವೀಕಾರದ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ದತ್ತು-ಬದುಕಿಗೆ ಹೊಸ ಬೆಳಕು ಎಂಬ ವಿಶೇಷ ಕಾರ್ಯಕ್ರಮವನ್ನು ಜು.17ರ ಬೆಳಿಗ್ಗೆ 11ಕ್ಕೆ ಗಾಂಧಿ ಭವನದಲ್ಲಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ದಿಲೀಪ್ ತಿಳಿಸಿದ್ದಾರೆ.

ಸಮಾರಂಭದಲ್ಲಿ ತಜ್ಞರು ದತ್ತು ಸ್ವೀಕಾರದ ಕಾನೂನು ಮತ್ತು ಸಾಮಾಜಿಕ ಅಂಶಗಳ ಕುರಿತು ಮಾಹಿತಿ ನೀಡಲಿದ್ದಾರೆ. ಇದು ಯಾವುದೇ ಕಠಿಣ ತರಗತಿಯಲ್ಲ, ಬದಲಾಗಿ ದತ್ತು ಪಡೆಯಲು ಇಚ್ಛಿಸುವ ದಂಪತಿಗಳು ಹಾಗೂ ಸಾರ್ವಜನಿಕರು ಮುಕ್ತವಾಗಿ ಚರ್ಚಿಸಬಹುದಾದ ಸ್ನೇಹಪರ ವೇದಿಕೆಯಾಗಿದೆ.

ಒಂದು ಮಗು ತನ್ನ ಪಾಲಕರನ್ನು ಹುಡುಕುತ್ತಿದೆ, ಪಾಲಕರು ತಮ್ಮ ಮಗುವನ್ನು ಎದುರು ನೋಡುತ್ತಿದ್ದಾರೆ. ಈ ಇಬ್ಬರನ್ನೂ ಕಾನೂನುಬದ್ಧವಾಗಿ ಒಂದಾಗಿಸುವ ಈ ಸಾಮಾಜಿಕ ಚಳವಳಿಯಲ್ಲಿ ಹಾಸನ ಜಿಲ್ಲೆಯ ಸಾರ್ವಜನಿಕರು ಸಹಕರಿಸಬೇಕೆಂದು ಕೋರಿದರು.

ಜಿಲ್ಲೆಯ ಮತಗಟ್ಟೆ ಅಧಿಕಾರಿಗಳು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ. ಮತಗಟ್ಟೆ ಏಜೆಂಟ್ ಕೂಡ ಸಹಕಾರ



ನೀಡಿ ಅರ್ಹ ಮತದಾರರ ಹೆಸರು ಪಟ್ಟಿಯಿಂದ ಕೈಬಿಟ್ಟು ಹೋಗದಂತೆ ಸಹಕರಿಸಬೇಕು. ಮತಗಟ್ಟೆ ಅಧಿಕಾರಿಗಳು ಹಾಗೂ ಮತಗಟ್ಟೆ ಏಜೆಂಟ್‌ಗಳ ಸಭೆ ನಡೆಸಲು ಸೂಚನೆ ನೀಡಲಾಗಿದೆ ಎಂದರು.

### ರಾಜಕೀಯ ಪಕ್ಷಗಳಿಂದ ಏಜೆಂಟರ ನೇಮಕ

ಎಲ್ಲಾ ವಿಧಾನಸಭಾ ಕ್ಷೇತ್ರಗಳ ಆಯಾ ಮತಗಟ್ಟೆಗಳ ವ್ಯಾಪ್ತಿಗೆ ಮತಗಟ್ಟೆ ಏಜೆಂಟನ್ನು ನೇಮಿಸುವಂತೆ ಕೋರಿದ್ದು, ಅದರಂತೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಿಂದ 1965, ಬಿಜೆಪಿಯಿಂದ 1600, ಜನತಾದಳ (ಎಸ್) ಪಕ್ಷದಿಂದ 1671 ಹಾಗೂ ಬಹುಜನ ಸಮಾಜ ಪಾರ್ಟಿ ಪಕ್ಷದಿಂದ 147 ಸೇರಿ ರಾಜಕೀಯ ಪಕ್ಷಗಳಿಂದ ಒಟ್ಟು 5383 ನೇಮಕ ಮಾಡಲಾಗಿದೆ.

ಮತಗಟ್ಟೆ ಅಧಿಕಾರಿಗಳು ಮತಗಟ್ಟೆಯ ವ್ಯಾಪ್ತಿಯಲ್ಲಿ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯ ಮಾಹಿತಿಯನ್ನು ನೀಡುವ ಸಲುವಾಗಿ ತಮ್ಮ-ತಮ್ಮ ರಾಜಕೀಯ ಪಕ್ಷಗಳಿಂದ ಆಯಾ ಮತಗಟ್ಟೆ ವ್ಯಾಪ್ತಿಗೆ ನೇಮಕ ಮಾಡಲಾದ ಎಲ್ಲಾ ಮತಗಟ್ಟೆ ಏಜೆಂಟರುಗಳನ್ನು ಒಳಗೊಂಡಂತೆ ಸಭೆ ನಡೆಸಿ {Meeting of Minutes (MOM) ಸಿದ್ಧಪಡಿಸಿ, ತಂತ್ರಾಂಶದಲ್ಲಿ ಖಿಟ್ಟುಟಚಥ ಮಾಡಲಾಗುತ್ತದೆ. ಈ ಮಾಹಿತಿಯನ್ನು ಈಗಾಗಲ್ಲೆ ನೇಮಕ ಮಾಡಲಾದ ಎಲ್ಲಾ ಮತಗಟ್ಟೆ ಏಜೆಂಟರ ಗಮನಕ್ಕೆ ತರುವಂತೆ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ತಿಳಿಸಲಾಗಿದೆ ಎಂದರು.

ಅಪರ ಜಿಲ್ಲಾಧಿಕಾರಿ ಹೆಚ್.ಕೆ ಕೃಷ್ಣಮೂರ್ತಿ ಉಪಸ್ಥಿತರಿದ್ದರು.

---

## ಕೆ.ಟಿ.ಶಿವಪ್ರಸಾದ್‌ಗೆ ಜು. 19ಕ್ಕೆ ನುಡಿ ನಮನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಜು. 19ರ ಭಾನುವಾರ ಬೆಳಿಗ್ಗೆ 10.30ಕ್ಕೆ ಅಂತಾರಾಷ್ಟ್ರೀಯ ಖ್ಯಾತಿಯ ಚಿತ್ರಕಲಾವಿದ ಕೆ.ಟಿ.ಶಿವಪ್ರಸಾದ್ ಅವರಿಗೆ ನುಡಿ ನಮನ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಪತತ್ರಕರ್ತ ಹಾಗೂ ಕೆ.ಟಿ.ಶಿವಪ್ರಸಾದ್ ಬಳಗದ ಆರ್.ಪಿ.ವೆಂಕಟೇಶ್‌ಮೂರ್ತಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಪಿ.ಸ್ವರೂಪ್, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಕೇಂದ್ರ ಲಲಿತಕಲಾ ಅಕಾಡೆಮಿ ಮಾಜಿ ಅಧ್ಯಕ್ಷ ಚಿ.ಸು.ಕೃಷ್ಣಶೆಟ್ಟಿ, ಸಾಹಿತಿ ಬಾನು ಮುಷ್ತಾಕ್, ಮಾಜಿ ಸಂಸದ ಎಲ್. ಹನುಮಂತಯ್ಯ, ದಲಿತ ಚಳವಳಿಯ




ಮಾವಳ್ಳಿ ಶಂಕರ್, ರೈತ ನಾಯಕಿ ಚುಕ್ಕಿ ನಂಜುಂಡಸ್ವಾಮಿ, ಕವಿ ಸುಬ್ಬು ಹೊಲೆಯಾರ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಕುವೆಂಪು ಪ್ರತಿಷ್ಠಾನದ ಕಡಿದಾಳ್ ಪ್ರಕಾಶ್, ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ, ಒಕ್ಕಲಿಗರ ಸಂಘದ ಜಿಲ್ಲಾಧ್ಯಕ್ಷ ಜಿ.ಎಲ್. ಮುದ್ದೇಗೌಡ, ಮಹೇಂದ್ರ ಕಾರ್ಲೆ ಮತ್ತಿತರರು ಪಾಲ್ಗೊಳ್ಳಲಿದ್ದಾರೆ ಎಂದರು.

ಕೆ.ಟಿ.ಶಿವಪ್ರಸಾದ್ ಕೇವಲ ಚಿತ್ರಕಲಾವಿದರಾಗಿ ಮಾತ್ರವಲ್ಲದೆ ಹೋರಾಟಗಾರರಾಗಿ ಗುರುತಿಸಿಕೊಂಡಿದ್ದರು. ದಲಿತರು, ರೈತರು, ಕೂಲಿ ಕಾರ್ಮಿಕರು, ಮಹಿಳೆಯರು, ಅಲ್ಪಸಂಖ್ಯಾತರು ಹಾಗೂ ಶೋಷಿತ ವರ್ಗಗಳ ಹಕ್ಕುಗಳಿಗಾಗಿ ನಡೆದ ಅನೇಕ ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಜನಪರ ಚಳವಳಿಗಳಿಗೆ ಸೈದ್ಧಾಂತಿಕ ಹಾಗೂ ಸಾಂಸ್ಕೃತಿಕ ಬಲ ತುಂಬಿದ್ದಾರೆ ಎಂದರು.

ಕೆ.ಟಿ.ಶಿವಪ್ರಸಾದ್ ಅವರ ಹೆಸರಿನಲ್ಲಿ ಶಾಶ್ವತ ಕಲಾಗ್ರಾಮ ಸ್ಥಾಪಿಸುವಂತೆ ಸರ್ಕಾರ, ಜಿಲ್ಲಾಡಳಿತ ಹಾಗೂ ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಲಾಗುವುದು. ಕಲಾಗ್ರಾಮದಲ್ಲಿ ಚಿತ್ರಕಲಾ ಗ್ಯಾಲರಿ, ಲಲಿತಕಲೆ ಅಧ್ಯಯನ ಕೇಂದ್ರ, ನಾಟಕ ಹಾಗೂ ಜನಪದ ಚಟುವಟಿಕೆಗಳಿಗೆ ವೇದಿಕೆ, ಯುವ ಕಲಾವಿದರಿಗೆ ತರಬೇತಿ ಕೇಂದ್ರ ಮತ್ತು ಸಾಂಸ್ಕೃತಿಕ ಸಂಶೋಧನಾ ಘಟಕಗಳನ್ನು ಸ್ಥಾಪಿಸುವಂತೆ ಒತ್ತಾಯಿಸಲಾಗುವುದು. ಇಂತಹ ಕೇಂದ್ರ ನಿರ್ಮಾಣವಾದರೆ ಜಿಲ್ಲೆಯ ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ ಮತ್ತು ಮುಂದಿನ ತಲೆಮಾರಿಗೆ ಕಲಾ ಪರಂಪರೆಯನ್ನು ಪರಿಚಯಿಸುವ ಕೆಲಸವಾಗಲಿದೆ ಎಂದರು.

ಕೆ.ಟಿ.ಶಿವಪ್ರಸಾದ್ ಒಡನಾಡಿಗಳ ಬಳಗದ ಬಿ.ಎಸ್.ದೇಸಾಯಿ, ಎಂ.ಸೋಮಶೇಖರ್, ಧರ್ಮೇಶ್, ಕೃಷ್ಣದಾಸ್, ಚಲಂ ಹಾಡ್ಲಳ್ಳಿ, ಹೆಚ್.ಆರ್.ನವೀನ್ ಕುಮಾರ್ ಹಾಜರಿದ್ದರು.

---

## ಮಳೆಗಾಗಿ ಪಾರ್ವತಮ್ಮನ ಮೊರೆ ಹೋದ ಶಾಸಕ ಸಿಮೆಂಟ್ ಮಂಜು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಮಲೆನಾಡು ಭಾಗದಲ್ಲಿ ಈ ಬಾರಿ ವಾಡಿಕೆಗಿಂತ ಮಳೆ ಕೊರತೆಯಾಗಿರುವ ಹಿನ್ನೆಲೆಯಲ್ಲಿ ಶಾಸಕ ಸಿಮೆಂಟ್ ಮಂಜು ಅವರು ಮಗ್ಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ದೈತಪುರದಲ್ಲಿರುವ ಶ್ರೀ ಪಾರ್ವತಮ್ಮನವರ ಬೆಟ್ಟಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ ಉತ್ತಮ ಮಳೆಗಾಗಿ ಪ್ರಾರ್ಥಿಸಿದರು.

ಈ ವೇಳೆ ಮಾತನಾಡಿದ ಅವರು, ಈ ವೇಳೆಗೆ 488 ಮಿ.ಮೀ. ಮಳೆ ದಾಖಲಾಗಬೇಕಾಗಿದ್ದರೂ, ಇದುವರೆಗೆ ಕೇವಲ 355 ಮಿ.ಮೀ. ಮಳೆಯಷ್ಟೇ ಸುರಿದಿದ್ದು, ಶೇ.27ಕ್ಕೂ ಅಧಿಕ ಮಳೆ ಕೊರತೆಯಾಗಿದೆ. ಮತ್ತೊಂದೆಡೆ ಸಕಲೇಶಪುರ ಭಾಗದಲ್ಲಿ



ಜನವರಿಯಿಂದ ಜೂನ್ ಅಂತ್ಯದವರೆಗೆ ವಾಡಿಕೆಯಂತೆ 871.3 ಮಿ.ಮೀ. ಮಳೆ ಆಗಬೇಕಾಗಿದ್ದರೆ, 914.9 ಮಿ.ಮೀ. ಮಳೆ ದಾಖಲಾಗಿದೆ. ಆದರೆ ಕಳೆದ ಒಂದು ವಾರದಿಂದ ಮುಂಗಾರು ಕೈಕೊಟ್ಟಿರುವುದರಿಂದ ಮುಂದಿನ ದಿನಗಳಲ್ಲಿ ವಾಡಿಕೆಯಷ್ಟು ಮಳೆ ಸುರಿಯದ ಆತಂಕ ಎದುರಾಗಿದೆ. ಇದರ ಪರಿಣಾಮ ಕೃಷಿ ಚಟುವಟಿಕೆಗಳ ಮೇಲೆ ಪ್ರತಿಕೂಲ ಪರಿಣಾಮ ಬಿದ್ದು ರೈತರಲ್ಲಿ ಆತಂಕ ಮನೆ ಮಾಡಿದೆ ಎಂದು ಹೇಳಿದರು.

ಮಲೆನಾಡಿನ ರೈತರ ಬದುಕು ಸಂಪೂರ್ಣವಾಗಿ ಮಳೆಯನ್ನೇ ಅವಲಂಬಿಸಿದ್ದು, ಸಮರ್ಪಕ ಮಳೆಯಾದಾಗ ಮಾತ್ರ ಉತ್ತಮ ಫಸಲು ಬೆಳೆಯಲು ಸಾಧ್ಯ. ಇದೇ ಕಾರಣದಿಂದ ತಾಯಿ ಪಾರ್ವತಮ್ಮನವರ ಸನ್ನಿಧಿಯಲ್ಲಿ ರೈತರ ಕಲ್ಯಾಣ, ಸಮೃದ್ಧ ಮಳೆ, ಉತ್ತಮ ಬೆಳೆ ಹಾಗೂ ಬೆಳೆದ ಬೆಳೆಗೆ ನ್ಯಾಯಯುತ ಬೆಲೆ ದೊರೆಯಲಿ ಎಂಬ ಸಂಕಲ್ಪದೊಂದಿಗೆ ವಿಶೇಷ ಪೂಜೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ತಾಯಿ ಪಾರ್ವತಮ್ಮನವರ ಕೃಪೆಯಿಂದ ಮಲೆನಾಡಿನಲ್ಲಿ ಸಮೃದ್ಧ ಮಳೆಯಾಗಿ ರೈತರ ಬದುಕು ಹಸನಾಗಲಿ ಎಂದು ಅವರು ಪ್ರಾರ್ಥಿಸಿದರು.

ತಾಲೂಕು ಬಿಜೆಪಿ ಮಂಡಲ ಅಧ್ಯಕ್ಷೆ ಉಮಾ ರವಿಕುಮಾರ್, ದೇವಸ್ಥಾನ ಸಮಿತಿ ಅಧ್ಯಕ್ಷ ರವಿ, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ, ರಾಜ್‌ಕುಮಾರ್, ಮುಖಂಡರಾದ ಜಯಂತಿ, ನಂದಿನಿ ವಿಶ್ವನಾಥ್, ಪುವಯ್ಯ, ಸಿದ್ದೇಶ್, ಮಲ್ಲಿಕಾರ್ಜುನ, ಚಂದ್ರಕಾಂತ್, ಚೇತನ್, ಸಂಪತ್ ಅಬ್ಬನ ಹಲವರು ಉಪಸ್ಥಿತರಿದ್ದರು.

---

## ಚಿಕ್ಕಬೊಮ್ಮನಹಳ್ಳಿ: ಬಾಲಕನ ಮೇಲೆ ಹುಚ್ಚು ನಾಯಿ ದಾಳಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲ್ಲೂಕಿನ ಕೊಣನೂರು ಹೋಬಳಿಯ ಚಿಕ್ಕಬೊಮ್ಮನಹಳ್ಳಿಯಲ್ಲಿ ಹುಚ್ಚು ನಾಯಿಯ ದಾಳಿಯಲ್ಲಿ 8 ವರ್ಷದ ಬಾಲಕ ಗಂಭೀರ ಗಾಯಗೊಂಡಿರುವ ಘಟನೆ ಮಂಗಳವಾರ ನಡೆದಿದೆ.

ಕರ್ತಾಳು ಗ್ರಾಮದ ಗುಣಗೌಡ ಗಾಯಾಳು ಬಾಲಕ. ಅಜ್ಜಿ ಮನೆಗೆ ಬಂದಿದ್ದ ವೇಳೆ ಘಟನೆ ಸಂಭವಿಸಿದೆ. ಹುಚ್ಚುನಾಯಿ ಏಕಾಏಕಿ ದಾಳಿ ನಡೆಸಿ ತಲೆ, ಮುಖ ಹಾಗೂ ಮೂಗಿನ ಭಾಗಕ್ಕೆ ಕಚ್ಚಿ ಗಂಭೀರ ಗಾಯಗೊಳಿಸಿದೆ.

ಸ್ಥಳೀಯರು ತಕ್ಷಣ ಬಾಲಕನನ್ನು ಕೊಣನೂರು ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿದರು.

ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಹಾಸನದ ಹಿಮ್ಸ್‌ಗೆ ರವಾನಿಸಲಾಗಿದೆ. ಘಟನೆ ಬಳಿಕ ಗ್ರಾಮದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ. ಇದೇ ಹುಚ್ಚುನಾಯಿ ಮತ್ತಷ್ಟು ಜನರ ಮೇಲೂ ದಾಳಿ ನಡೆಸುವ ಭೀತಿ ಇರುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ನಾಯಿಯನ್ನು ಹಿಡಿದು ಸಾರ್ವಜನಿಕರ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

---

## ಅಪದ್ಧ ಪದ ಬಳಕೆ ಖಂಡಿಸಿದ ಅರ್ಚಕರ ಒಕ್ಕೂಟ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಶ್ರೀ ಆದಿಶಂಕರಾಚರ್ಯರ ಕುರಿತು ಅಪದ್ಧ ಪದಗಳಿಂದ ಮಾತನಾಡಿರುವ ಶಿರೂರು ಮಠದವರು ಕ್ಷಮೆಯಾಚಿಸಬೇಕೆಂದು ತಾಲ್ಲೂಕು ಹಿಂದು ದೇವಾಲಯಗಳ ಅರ್ಚಕರ ಒಕ್ಕೂಟದ ರಾಜ್ಯಾಧ್ಯಕ್ಷ ಡಾ.ಎಂ.ಎಸ್.ವಿಶ್ವನಾಥ್ ದೀಕ್ಷಿತ್ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಉಡುಪಿಯಲ್ಲಿ ಜು. 11ರಂದು ನಡೆದ ಹರಿಕಥೆ ಕಾರ್ಯಕ್ರಮದಲ್ಲಿ ಅವಹೇಳನಕಾರಿಯಾಗಿ ಮಾತನಾಡಿರುವುದು ಒಳ್ಳೆಯ ಬೆಳವಣಿಗೆಯಲ್ಲ. ಆದಿ ಶಂಕರರು ಹಿಂದೂ ಧರ್ಮದ ಪುನರುತ್ಥಾನಕ್ಕೆ ಕಾರಣಿಭೂತರಾಗಿದ್ದು ದೇಶದ ನಾಲ್ಕು ಕಡೆ ಪೀಠ ಸ್ಥಾಪಿಸುವ ಮೂಲಕ ಸಾಂಸ್ಕೃತಿಕ ಹಾಗೂ ಧಾರ್ಮಿಕ ಏಕತೆ,



ಅಖಂಡತೆಯನ್ನು ನಿರ್ಮಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಅಂತಹ ಮೇರು ವ್ಯಕ್ತಿಯ ಕುರಿತು ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಕ್ಷುಲ್ಲಕವಾಗಿ ಮಾತನಾಡುವುದು ಸರಿಯಲ್ಲ. ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಸಂಘಟಿಕರು ಎಚ್ಚರ ವಹಿಸಬೇಕು ಎಂದರು.

ಉಡುಪಿಯ ಅಷ್ಟ ಮಠಾಧೀಶರು ಶಂಕರರ ನಿಂದನೆಯ ವಿಚಾರವಾಗಿ ಬೇಷರತ್ ಕ್ಷಮೆ ಯಾಚಿಸಬೇಕು. ಪೇಜಾವರ ಶ್ರೀಗಳು ಮೌನ ಮುರಿದು ಘಟನೆಯನ್ನು ಖಂಡಿಸಬೇಕು. ಈ ಘಟನೆಯ ನೇರ ಹೊಣೆಯನ್ನು ಶಿರೂರು ಮಠವೇ ಹೊರಬೇಕು ಎಂದರು.

ಒಕ್ಕೂಟದ ಅಧ್ಯಕ್ಷ ಎಸ್. ಶ್ರೀನಿವಾಸ್, ಉಪಾಧ್ಯಕ್ಷ ಮಹೇಶ್ ದತ್ತ, ಗೌರವಾಧ್ಯಕ್ಷ ವೆಂಕಟೇಶ್ ಮೂರ್ತಿ, ನಿರ್ದೇಶಕ ಮಂಜುನಾಥ್ ಕೋಡಿಹಳ್ಳಿ ಮತ್ತಿತರರಿದ್ದರು.

---

## ವಳಗೆರಮ್ಮ ದೇಗುಲ ಆಸ್ತಿ ಸಂರಕ್ಷಣೆಗೆ ಸೂಚನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಪಟ್ಟಣದ ವಳಗೆರಮ್ಮ ದೇವಾಲಯಕ್ಕೆ ಸೇರಿದ 4 ಎಕರೆ ಜಮೀನು ಸಂರಕ್ಷಣೆಗೆ ಆದ್ಯತೆ ನೀಡಬೇಕು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ವಳಗೆರಮ್ಮ ದೇವಸ್ಥಾನದ ಆವರಣದಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ನೂತನವಾಗಿ ನಿರ್ಮಿಸಿರುವ ರಥದ ಮನೆಯನ್ನು ಉದ್ಘಾಟಿಸಿ ಮಂಗಳವಾರ ಮಾತನಾಡಿದ ಅವರು, ದೇವಾಲಯದ ಅಭಿವೃದ್ಧಿಗೆ ಈ ಜಮೀನು ಬಳಕೆಯಾಗಬೇಕು. ದೇವಸ್ಥಾನದ ಜಮೀನನ್ನು ಅನ್ಯರ ಪಾಲಾಗದಂತೆ ರಕ್ಷಿಸುವುದು ಜವಾಬ್ದಾರಿ. ದೇವಾಲಯ ಆಸ್ತಿಗಳನ್ನು ದುರುಪಯೋಗಪಡಿಸಿಕೊಳ್ಳಬಾರದು. ದೇವಾಲಯ ಅಭಿವೃದ್ಧಿಗೆ ಇರುವ ಜಮೀನುಗಳನ್ನು ದೇವಾಲಯದ ಆಸ್ತಿ, ಆಡಳಿತ ಮಂಡಳಿಯವರು ಆಸ್ತಿ ರಕ್ಷಣೆ ಮಾಡಬೇಕು ಎಂದರು.

ಭಕ್ತರ ಅನುಕೂಲಕ್ಕಾಗಿ ಸ್ವಚ್ಛ ಭಾರತ್ ಯೋಜನೆಯಡಿ ವಳಗೆರಮ್ಮ ದೇವಸ್ಥಾನ ಆವರಣದಲ್ಲಿ



ಶೌಚಾಲಯ ಮತ್ತು ಸ್ನಾನದ ಗೃಹ ನಿರ್ಮಿಸಬೇಕೆಂದು ಶಾಸಕ ಸಿ.ಎನ್.ಬಾಲಕೃಷ್ಣ ಪುರಸಭೆ ಅಧಿಕಾರಿಗಳಿಗೆ ಸೂಚಿಸಿದರು.

ವಳಗೆರಮ್ಮ ಗ್ರಾಮ ದೇವತೆಯಾಗಿದ್ದು ಭಕ್ತರ ಸಂಖ್ಯೆಯು ಹೆಚ್ಚಿದೆ. ರಸ್ತೆ, ದೇವಾಲಯದ ಆವರಣದಲ್ಲಿ ನೆಲಹಾಸು ಸೇರಿ ವಿವಿಧ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದೆ. ದೇಗುಲ ಸೇವಾ ಸಮಿತಿ ಮನವಿಯಂತೆ ಪ್ರತಿವರ್ಷ ಜಾತ್ರೆಗೆ ಪುರಸಭೆಯಿಂದ 1 ಲ.ರೂ. ಅನುದಾನ ನೀಡಲಾಗುವುದು ಎಂದರು.

ಪ್ರತಿ ಅಮವಾಸೆ ವಿಶೇಷ ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸುವ ಭಕ್ತಾದಿಗಳಿಗೆ ಅನುಕೂಲವಾಗಲೆಂದು ಊಟದ ಮನೆ ಸೇರಿ ದೇವಸ್ಥಾನದ ಛಾವಣಿಗೆ ಸೀಟ್ ಅಳವಡಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

ಪುರಸಭಾ ಮುಖ್ಯಾಧಿಕಾರಿ ಆರ್.ಯತೀಶ್ ಕುಮಾರ್, ಮಾಜಿ ಅಧ್ಯಕ್ಷ ಕೋಟೆ ಮೋಹನ್, ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸುರೇಶ್, ಮಾಜಿ ಸದಸ್ಯರಾದ ಸತ್ಯನಾರಾಯಣ, ಗಣೇಶ್, ಮುಖಂಡರಾದ ಜೈದೀಪ್ ಬಾಲಕೃಷ್ಣ, ಶಾಮಿಯಾನ ರಘು, ರಾಜು, ಗುಡಿಗೌಡರ ವಂಶಸ್ಥರಾದ ಸಿ.ಎನ್.ದೇವರಾಜು, ಬಾಬು ನಾಗರಾಜು, ಸಿ.ಡಿ.ನಾಗೇಂದ್ರ, ಉಮೇಶ್, ಧೀರಜ್ ಭಾಗವಹಿಸಿದ್ದರು.

# ಎತ್ತಿನಹೊಳೆ ಪೈಪ್‌ಲೈನ್‌ನಿಂದ ಹರಿದ 8 ಕೋಟಿ ಲೀ. ನೀರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಕಲೇಶಪುರ ತಾಲ್ಲೂಕಿನ ಹಲಸುಲಿಗೆ ಗ್ರಾಮದ ಬಳಿ ಎತ್ತಿನಹೊಳೆ ಯೋಜನೆಯ ಪೈಪ್‌ಲೈನ್ ಒಡೆದು ನೀರು ಚಿಮ್ಮಿದ ಹಿನ್ನೆಲೆಯಲ್ಲಿ ದುರಸ್ತಿ ಕಾರ್ಯ ಪ್ರಾರಂಭಿಸಲಾಗಿದೆ.

ಭಾನುವಾರ ಬೆಳಗಿನ ಜಾವ 3.30ರ ವೇಳೆಗೆ ಒಡೆದ ಪೈಪ್‌ನಿಂದ ಸುಮಾರು 6 ಗಂಟೆಗಳ ಕಾಲ ಆಕಾಶದೆತ್ತರಕ್ಕೆ ನೀರು ಕಾರಂಜಿಯಂತೆ ಚಿಮ್ಮಿತು. ಒಟ್ಟು 8 ಕೋಟಿ ಲೀಟರ್ ನೀರು ಪೋಲಾಗಿದೆ. ಸ್ಥಳೀಯರ ಮಾಹಿತಿ ಆಧರಿಸಿ ಸ್ಥಳಕ್ಕೆ ದೌಡಾಯಿಸಿದ್ದ ಅಧಿಕಾರಿಗಳು ತ್ವರಿತಗತಿಯಲ್ಲಿ ನೀರಿನ ಸಂಪರ್ಕ ಕಡಿತಗೊಳಿಸಿ ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ. ಭಾನುವಾರ ಮಧ್ಯಾಹ್ನದಿಂದಲೇ ಬೃಹದಾಕಾರದ ಪೈಪ್‌ನಲ್ಲಿ ಮ್ಯಾನ್‌ಹೋಲ್ ನಿರ್ಮಿಸಿ ವೆಲ್ಡಿಂಗ್ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ದೊಡ್ಡನಾಗರ ಗ್ರಾಮದಿಂದ ಹೆಬ್ಬನಹಳ್ಳಿ ವರೆಗೆ ಭೂಮಿಯ ಅಡಿ ಅಳವಡಿಸಿರುವ ಸುಮಾರು 10 ಅಡಿ ಸುತ್ತಳತೆಯ ಪೈಪ್‌ನ ವೆಲ್ಡಿಂಗ್ ತುಂಡಾಗಿ ಅವಾಂತರ ಸೃಷ್ಟಿಯಾಗಿದೆ ಎಂದು ಅಂದಾಜಿಸಲಾಗಿದೆ. ದುರಸ್ತಿ ಕಾರ್ಯ ಪ್ರಾರಂಭಿಸಬೇಕೆಂದರೆ ಪೈಪ್‌ನಲ್ಲಿ ಸಂಗ್ರಹವಿರುವ ಭಾರೀ ಪ್ರಮಾಣದ ನೀರನ್ನು ಹೊರ ತೆಗೆಯಬೇಕು. ಅದಕ್ಕಾಗಿ ಪೈಪ್‌ಗೆ ರಂಧ್ರ ಮಾಡಿ ನೀರನ್ನು ಹೊರಬಿಡಲಾಗುತ್ತಿದೆ. ಜೊತೆಗೆ ನೀರಿನ ಒತ್ತಡ ಕಡಿಮೆ ಮಾಡುವ ಉದ್ದೇಶದಿಂದ ನಿರ್ಮಿಸಿರುವ ವಾಲ್ವ್‌ಗಳನ್ನು ತೆರೆದು ಸಮೀಪದ ಹಳ್ಳಕ್ಕೆ ನೀರನ್ನು ಹರಿಸಲಾಗುತ್ತಿದೆ. ಅಂದಾಜು ಎರಡು ದಿನಗಳಿಂದ ಈ ಪ್ರಕ್ರಿಯೆ ನಡೆಯುತ್ತಿದ್ದರೂ ನೀರಿನ ರಭಸ ಕಡಿಮೆಯಾಗಿಲ್ಲ. ಈ ಪ್ರಕ್ರಿಯೆಗಾಗಿ ಅಧಿಕಾರಿಗಳು ಹಗಲಿರುಳು ಶ್ರಮಿಸುತ್ತಿದ್ದಾರೆ.



### 20 ಸಾವಿರ ಜಾಯಿಂಟ್‌ಗಳಿವೆ

ಬಯಲು ಸೀಮೆ ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಕಳೆದ 12 ವರ್ಷಗಳಿಂದ ನಡೆಯುತ್ತಿರುವ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ. ಪ್ರಾರಂಭಿಕ ಹಂತವಾಗಿ ನೀರನ್ನು ಹರಿಸಲಾಗುತ್ತಿದೆಯಾದರೂ ಅದು ಇನ್ನು ವಾಣಿವಿಲಾಸ ಸಾಗರ ಅಣೆಕಟ್ಟೆ ತಲುಪಿದೆ. ಯೋಜನೆ ಪ್ರಾರಂಭವಾಗುವ ಹೊಂಗಡಹಳ್ಳದಿಂದ 126 ಕಿ.ಮೀ. ಪೈಪ್ ಲೈನ್ ವ್ಯವಸ್ಥೆ ಮಾಡಲಾಗಿದೆ. ಮುಖ್ಯವಾಗಿ ಹೊಂಗಡಹಳ್ಳ, ಕಾಡುಮನೆ, ಎತ್ತಿನಹೊಳೆ, ಕೆರೆಹೊಳೆ, ಕೆಂಬಹಳ್ಳಿ, ದೊಡ್ಡನಾಗರದಂತಹ ಪ್ರದೇಶಗಳಲ್ಲಿ ಸೂಕ್ಷ್ಮ ಕೆಲಸಗಳನ್ನು ನಿರ್ವಹಿಸಲಾಗಿದೆ. 126 ಕಿ.ಮೀ. ವ್ಯಾಪ್ತಿಯ ಪೈಪ್‌ಗಳಲ್ಲಿ ಅಂದಾಜು 20 ಸಾವಿರ ಜಾಯಿಂಟ್‌ಗಳಿವೆ. ಅಳವಡಿಕೆ ಹಂತದಲ್ಲಿ ಎಲ್ಲಾ ಜಾಯಿಂಟ್‌ಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗಿದೆ. 207 ವೆಲ್ಡಿಂಗ್ ವಿಸ್ತೀರ್ಣ ಹೊಂದಿದೆ. ಪೈಪ್ ಅಳವಡಿಸುವಾಗ ಅಲ್ಟ್ರಾಸೊನಿಕ್ ಎಂಬ ಪರೀಕ್ಷೆಯನ್ನು ಕೈಗೊಳ್ಳಲಾಗಿದೆ. ಹೀಗೆಂದರೆ 1 ಕಿ.ಮೀ. ವರೆಗೆ ನೀರಿನ ಹರಿವು ಸ್ಥಗಿತಗೊಳಿಸಿ 24 ಗಂಟೆಗಳ ವರೆಗೆ ಹೈಡ್ರೋ ಟೆಸ್ಟ್ ಮಾಡಲಾಗುತ್ತದೆ. ಆಗ ಎಲ್ಲಿಯೂ ಕಾಣಿಸಿಕೊಳ್ಳದ ಬಿರುಕು ಈಗ ಕಾಣಿಸಿಕೊಂಡಿರುವು ಇಂಜಿನಿಯರ್‌ಗಳಿಗೂ ಅಚ್ಚರಿ ಮೂಡಿಸಿದೆ. ಮಳೆಗಾಲ ಸಂದರ್ಭದಲ್ಲಿ ಮಣ್ಣು ಸ್ವಲ್ಪ ಸಡಿಲಗೊಂಡು ರಂಧ್ರ ಉಂಟಾಗಿ ಅದರಿಂದ ನೀರು ಸೋರಿಕೆಯಾಗಿ ನಂತರ ಭಾರೀ ಪ್ರಮಾಣದಲ್ಲಿ ಚಿಮ್ಮಿದೆ. ಪೈಪ್‌ಗಳಿಗೆ ದೊಡ್ಡ ಪ್ರಮಾಣದಲ್ಲಿ ಹಾನಿಯಾಗದಂತೆ ತಡೆಯಲು ಪ್ರತಿ 500 ಮೀಟರ್‌ಗೆ ಒಂದು ಆ್ಯಂಕರ್ ಬ್ಲಾಕ್ ಹಾಕಲಾಗಿದೆ. ಇದು ಏನೇ ಅವಘಡದ ಮುನ್ಸೂಚನೆ ಸಿಕ್ಕರೂ ಮೊದಲೇ ಅರಿಯಲು ಸಹಾಯವಾಗುತ್ತದೆ.

### 8 ಕೋಟಿ ರೂ. ಪ್ರಸ್ತಾವನೆಗೆ ಸಿದ್ಧತೆ

126 ಕಿ.ಮೀ. ಪೈಪ್‌ಲೈನ್‌ಗೆ ನಾಲ್ಕು ಮಾರ್ಗಗಳನ್ನು ಮಾಡಿಕೊಳ್ಳಲಾಗಿದೆ. ಆದರೆ ಒಂದು ಕಡೆ ಅವಘಡ ಸಂಭವಿಸಿದೆ ಉಳಿದ 3 ಕಡೆಗೂ ನೀರಿನ ಹರಿವು ಸ್ಥಗಿತಗೊಳಿಸಬೇಕಾಗುತ್ತದೆ. ಆದ್ದರಿಂದ ಒಟ್ಟು ಎಂಟು ಕಡೆ ವಾಲ್ವ್‌ಗಳನ್ನು ಹಾಕಿದರೆ ಸಮಸ್ಯೆ ಕಾಣಿಸಿಕೊಳ್ಳುವ ಮಾರ್ಗದಲ್ಲಿ ಮಾತ್ರ ನೀರಿನ ಹರಿವು ನಿಲ್ಲಿಸಿ ಉಳಿದ ಮಾರ್ಗಗಳ ಮೂಲಕ ನೀರು ಹರಿಯುವಂತೆ ಮಾಡಬಹುದಾಗಿದೆ. ಈ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ನಿರ್ಧರಿಸಲಾಗಿದೆ.

# ಶಾಲಾ ಮಕ್ಕಳಿಗೆ ಗುರುತಿನ ಚೀಟಿ ವಿತರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಕೊಣನೂರು: ಅರಕಲಗೂಡು ತಾಲ್ಲೂಕು ಕೊಣನೂರು ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ನಗರದ ಆದಿ ಕರ್ನಾಟಕ ಕಿರಿಯ ಪ್ರಾಥಮಿಕ ಪಾಠ ಶಾಲೆಯ ವಿದ್ಯಾರ್ಥಿಗಳಿಗೆ ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷೆ ಎಂ.ಆರ್.ರಂಜಿನಿ ಅವರು ತಮ್ಮ ವೆಚ್ಚದಲ್ಲಿ ಗುರುತಿನ ಚೀಟಿಗಳನ್ನು ವಿತರಿಸಿದರು.



ಎಂ.ಆರ್.ರಂಜಿನಿ ಮಾತನಾಡಿ, ಸರ್ಕಾರಿ ಶಾಲೆಗಳು ಖಾಸಗಿ ಶಾಲೆಗಳಿಗಿಂತ ಕಡಿಮೆಯಿಲ್ಲ. ಸರ್ಕಾರಿ ಶಾಲೆಗಳಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿದ್ದು, ಗುಣಮಟ್ಟದ ಶಿಕ್ಷಣವೂ ಉತ್ತಮವಾಗಿ ದೊರೆಯುತ್ತಿದೆ. ಸರ್ಕಾರಿ ಶಾಲೆಗಳ ಬಗ್ಗೆ ಸಾರ್ವಜನಿಕರಲ್ಲಿ ಉತ್ತಮ ಅಭಿಪ್ರಾಯ ಮೂಡಬೇಕೆಂಬ ಉದ್ದೇಶದಿಂದ ಮಕ್ಕಳಿಗೆ ಅಗತ್ಯವಾಗಿರುವ ಗುರುತಿನ ಚೀಟಿಗಳನ್ನು ಸ್ವಂತ ಖರ್ಚಿನಲ್ಲಿ ಮಾಡಿಸಿಕೊಟ್ಟಿರುವುದಾಗಿ ತಿಳಿಸಿದರು.

ಪ್ರತಿ ವಿದ್ಯಾರ್ಥಿಯೂ ಉತ್ತಮ ಶಿಕ್ಷಣ ಪಡೆದು ಉನ್ನತ ಸ್ಥಾನಕ್ಕೇರಬೇಕು. ಮುಂದೆಯೂ ಶಾಲೆಯ ಅಭಿವೃದ್ಧಿಗೆ ಅಗತ್ಯವಾದ ಸಹಕಾರ ನೀಡಲು ಸದಾ ಸಿದ್ಧರಿರುವುದಾಗಿ ಹೇಳಿದರು.

ಮುಖ್ಯ ಶಿಕ್ಷಕ ಕುಮಾರ್ ಅವರು ಮಾತನಾಡಿ, ವಿದ್ಯಾರ್ಥಿಗಳ ಸುರಕ್ಷತೆ ಹಾಗೂ ಶಾಲೆಯ ಶಿಸ್ತು ಕಾಪಾಡುವಲ್ಲಿ ಗುರುತಿನ ಚೀಟಿಗಳು ಸಹಕಾರಿಯಾಗಲಿವೆ ಎಂದರು.

ಶಿಕ್ಷಕಿ ಮಂಜುಳಾ, ವಿದ್ಯಾರ್ಥಿಗಳು ಹಾಗೂ ಶಾಲಾ ಸಿಬ್ಬಂದಿ ಹಾಜರಿದ್ದರು.

# ಹನ್ಯಾಳು ಪ್ರೌಢಶಾಲಾ ಮಕ್ಕಳಿಂದ ಎಸ್‌ಐಆರ್ ಜಾಗೃತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಕೊಣನೂರು: ರಾಜ್ಯಾದ್ಯಂತ ನಡೆಯುತ್ತಿರುವ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ಐಆರ್) ಪ್ರಕ್ರಿಯೆಯಲ್ಲಿ ತಪ್ಪದೇ ಭಾಗಹಿಸಬೇಕೆಂದು ಅರಕಲಗೂಡು ತಾಲ್ಲೂಕು ಹನ್ಯಾಳು ದಿ. ಗೌರಮ್ಮ ಪುಟ್ಟಸ್ವಾಮಪ್ಪ ಸ್ಮಾರಕ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿಗಳು ಜಾಗೃತಿ ಜಾಥಾ ಮೂಲಕ ಅರಿವು ಮೂಡಿಸಿದರು.



ಪ್ರೌಢಶಾಲಾ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಕೆ.ಎನ್.ರವಿಕುಮಾರ್ ಮಾತನಾಡಿ, ಚುನಾವಣಾ ಆಯೋಗದಿಂದ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ನಡೆಯುತ್ತಿದ್ದು, ಸದೃಢ ಪ್ರಜಾಪ್ರಭುತ್ವಕ್ಕೆ ಸಂವಿಧಾನ ನೀಡಿರುವ ಮತದಾನ ಎಂಬ ಪವಿತ್ರ ಕಾರ್ಯ ಅವಶ್ಯ. 18 ವರ್ಷ ತುಂಬಿದ ಪ್ರತಿಯೊಬ್ಬರು ತಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ನೋಂದಾಯಿಸಿಕೊಳ್ಳಬೇಕು ಎಂದರು.

ಮನೆಗಳಿಗೆ ಬೂತ್ ಮಟ್ಟದ ಅಧಿಕಾರಿಗಳು ಬಂದಾಗ ಗಣತಿ ನಮೂನೆಗಳನ್ನು ಜು. 29ರ ಒಳಗೆ ಭರ್ತಿ ಮಾಡಿಕೊಡಬೇಕು.

ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಸರಿ ಇದೆಯೇ, ತಿದ್ದುಪಡಿ, ಸೇರ್ಪಡೆ ಆಗಬೇಕೆ ಎಂದು ನೋಡಿಕೊಳ್ಳಬೇಕೆಂದರು.

ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಜಿ.ಸಿ.ರವಿಕುಮಾರ ಅವರು ಮಾತನಾಡಿ, ಎಲ್ಲಾ ಅರ್ಹ ಮತದಾರರು ತಮ್ಮ ಹೆಸರನ್ನು ಕಡ್ಡಾಯವಾಗಿ ಮತದಾರರ ಪಟ್ಟಿಯಲ್ಲಿ ನೋಂದಾಯಿಸಿಕೊಳ್ಳಬೇಕು. ಒಂದು ವೇಳೆ ನಿರ್ಲಕ್ಷ್ಯ ವಹಿಸಿದರೇ ಮತದಾನದ ಕಾರ್ಯದಿಂದ ದೂರವಾಗಿ ಒಂದು ಜವಾಬ್ದಾರಿ ಸರ್ಕಾರ ರಚನೆ ಮಾಡುವ ಅವಕಾಶದಿಂದ ವಂಚಿತರಾಗುತ್ತಿರಿ ಎಂದರು.

ಅಭಿಯಾನದಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕೃಷ್ಣೇಗೌಡ, ಬಿಎಲ್ಒ ನಂದಿನಿ, ನಿವೃತ್ತ ಶಿಕ್ಷಕ ಲಕ್ಕೇಗೌಡ, ಶಿಕ್ಷಕರಾದ ಡಿ.ಹೆಚ್.ಗೀತಾ, ಸುಬ್ಬಲಕ್ಷ್ಮಿ, ರಂಗಯ್ಯ, ಮೇಘನಾ, ಕುಮಾರ್, ಗ್ರಾಮ ಪಂಚಾಯಿತಿ ನೌಕರರಾದ ದಿನೇಶ್, ಹನುಮೇಶ್ ಮತ್ತಿತರರಿದ್ದರು.

# ಗೊಲ್ಲರಹಳ್ಳಿ ಗಂಗಾಧರೇಶ್ವರ ಸ್ವಾಮಿ ದೇಗುಲ ಅಭಿವೃದ್ಧಿಗೆ ಕ್ರಮ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ತಾಲೂಕಿನ ಗಂಡಸಿ ಹೋಬಳಿ ಗೊಲ್ಲರಹಳ್ಳಿ ಗ್ರಾಮದ ಸರಹದ್ದಿನಲ್ಲಿರುವ ಶ್ರೀ ಗಂಗಾಧರೇಶ್ವರ ಸ್ವಾಮಿ ಸುಕ್ಷೇತ್ರ, ಗಂಗೆಮಡು ಪ್ರದೇಶವನ್ನು ಐತಿಹಾಸಿಕ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಲು ಎಲ್ಲರ ಸಹಕಾರದೊಂದಿಗೆ ಕನಕ ನೌಕರರ ಕ್ಷೇಮಾಭಿವೃದ್ಧಿ ಸಂಘ ನಿರಂತರ ಪ್ರಯತ್ನ ನಡೆಸುತ್ತಿದೆ ಎಂದು ಸಂಘದ ನಿಕಟಪೂರ್ವ ಅಧ್ಯಕ್ಷ ಗಿರಿಗೌಡ ಹೇಳಿದರು.



ದೇಗುಲದ ಜೀರ್ಣೋದ್ಧಾರ ಸೇರಿದಂತೆ 30 ಎಕರೆ ಜಾಗದಲ್ಲಿ ನಡೆಯುತ್ತಿರುವ ವಿವಿಧ ಕಾರ್ಯಗಳ ಪರಿಶೀಲನೆ ಸಭೆ ನಡೆಸಿ ಅವರು ಮಾತನಾಡಿದರು. ಚಿಕ್ಕಮಗಳೂರು, ಮೈಸೂರು, ಹಾಸನ, ಕೊಡಗು, ಮಂಡ್ಯ, ಚಾಮರಾಜನಗರ, ದಕ್ಷಿಣ ಕನ್ನಡ ಸೇರಿ ಹಲವು ಜಿಲ್ಲೆಗಳಲ್ಲಿ ಸಮುದಾಯ ದೊಡ್ಡ ಸಂಖ್ಯೆಯಲ್ಲಿದೆ. ಇದನ್ನು ಮನಗಂಡು ಕೆ.ಆರ್. ನಗರದ ಕಾಗಿನೆಲೆ ಕನಕ ಗುರುಪೀಠದ ಶ್ರೀ ಶಿವಾನಂದಪುರಿ ಸ್ವಾಮೀಜಿ ಹಾಗೂ ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ ಸಹಕಾರ ಪಡೆದು ಶ್ರೀ ಗಂಗಾಧರೇಶ್ವರ ಸ್ವಾಮಿ ದೇಗುಲವನ್ನು ವಿನೂತನ ರೀತಿಯಲ್ಲಿ ಪುನರ್ ನಿರ್ಮಾಣ ಮಾಡಲಾಗಿದೆ. ಇದಲ್ಲದೇ ಕನಕ ನೌಕರರ ಸಂಘದ ವತಿಯಿಂದ ಸ್ವಾಮೀಜಿ ವಿಶ್ರಾಂತಿ ಗೃಹ ಕಟ್ಟಲಾಗಿದೆ. ಗೊಲ್ಲರಹಳ್ಳಿ ಗ್ರಾಮದ ಬಳಿ ಅಂದಾಜು ಒಂದು ಕೋಟಿ ರೂ.ವೆಚ್ಚದಲ್ಲಿ ಬೃಹತ್ ಪ್ರವೇಶ ದ್ವಾರದ ಕೆಲಸ ಪ್ರಗತಿಯಲ್ಲಿದೆ. ರಸ್ತೆ, ಕುಡಿಯುವ ನೀರು, ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಬಸವಾದಿ ಶಿವಶರಣರು, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ಕವಿರತ್ನ ಕಾಳಿದಾಸ, ಶ್ರೀ ಬೀರಲಿಂಗೇಶ್ವರ, ಶ್ರೀ ಗುರುಸಿದ್ದರಾಮೇಶ್ವರ, ಶ್ರೀ ರೇವಣ ಸಿದ್ದೇಶ್ವರ ದೇವರು ಹಾಗೂ ಚಾಮುಂಡೇಶ್ವರಿ ತಾಯಿ ವಿಗ್ರಹ ಸ್ಥಾಪನೆ ಮಾಡಲಿದ್ದೇವೆ. ನಗರಾಭಿವೃದ್ಧಿ ಸಚಿವ ಯತೀಂದ್ರ ಸಿದ್ದರಾಮಯ್ಯ, ಗ್ಯಾರಂಟಿ ಅನುಷ್ಠಾನ ಸಮಿತಿ ರಾಜ್ಯಾಧ್ಯಕ್ಷ ಎಚ್.ಎಂ.ರೇವಣ್ಣ, ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಟೇಲ್ ಶಿವಪ್ಪ ಒಳಗೊಂಡಂತೆ ಸಮಾಜದ ಎಲ್ಲರ ಸಹಕಾರ ಪಡೆದು ಸನ್ನಿಧಿಯನ್ನು ಐತಿಹಾಸಿಕ ಪ್ರವಾಸಿ ತಾಣವಾಗಿ ಮಾರ್ಪಡಿಸಲು ಸಂಕಲ್ಪ ಮಾಡಿದ್ದೇವೆ ಎಂದು ತಿಳಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಮೋಹನ್ ಕುಮಾರ್, ಸೋಮಶೇಖರ್, ಬಸವರಾಜು, ಕುಬೇರ್, ರಮೇಶ್, ನಾಗರಾಜ್ ಬೀರಲಿಂಗೇಗೌಡ, ಬಿ.ಪರಮೇಶ್, ರಂಗಸ್ವಾಮಿ, ಚಿದಾನಂದ, ಕುಮಾರ್, ಬೀರಲಿಂಗೇಗೌಡ, ದಾಸೇಗೌಡ, ಕೃಷ್ಣ, ದಿನೇಶ್, ಸತೀಶ್, ಚಂದ್ರೇಗೌಡ ಹಲವರು ಹಾಜರಿದ್ದರು.

# ಜೆಸಿಐ ಹಾಸನ ಹೇಮಾವತಿ ವಲಯ ಉದ್ಘಾಟನೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜೆಸಿಐ ಹಾಸನ ಹೇಮಾವತಿ ವಲಯ 14ರ ಉದ್ಘಾಟನಾ ಸಮಾರಂಭ ನಗರದ ಕ್ಷೀರ ಸಮುದಾಯ ಭವನದಲ್ಲಿ ಇತ್ತೀಚೆಗೆ ನೆರವೇರಿತು.

ಜೆಸಿಐ ರಾಷ್ಟ್ರೀಯ ಉಪಾಧ್ಯಕ್ಷ ಜೆ.ಸಿ.ಜಿತೇಶ್ ಅದ್ವಾನಿ ಅವರು ನೂತನ ಪದಾಧಿಕಾರಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ವಲಯ ಅಧ್ಯಕ್ಷ ಪ್ರಜ್ವಲ್ ಎಸ್.ಜೈನ್ ಅವರು ಹಾಸನ ಹೇಮಾವತಿ ವಲಯ ನೂತನ ಅಧ್ಯಕ್ಷ ವಿಮಲ್ ರಾಜ್ ಅವರಿಗೆ ಪ್ರಮಾಣ ವಚನ ಬೋಧಿಸಿದರು. ಪತ್ರಕರ್ತ ಕೆಪಿಎಸ್ ಪ್ರಮೋದ್, ಕುಶಾಲನಗರ ಕಾವೇರಿ ಜೆಸಿಐ ಅಧ್ಯಕ್ಷ ಎಂ.ಶ್ರೀನಿವಾಸ್, ಜೆ.ಸಿ.ಉಮಾಮಹೇಶ್, ಹೇಮಾವತಿ ಮಾತನಾಡಿದರು.

ನೂತನ ಸದಸ್ಯರಾಗಿ ಪ್ರದೀಪ್, ತ್ಯಾಗರಾಜು, ಕೆ.ಸತೀಶ್, ಬಿ.ವಿ.ಸುಜಯ್ ಕುಮಾರ್, ಕೆ.ವಿ.ಗುರುಪ್ರಸಾದ್ ಕಾಮತ್, ಹೆಚ್.ವಿ.ವಿಕಾಸ್, ಎಸ್.ಸುನಿಲ್ ಕುಮಾರ್ ಮತ್ತಿತರರಿದ್ದರು.

# ಬೇಲೂರಿನಲ್ಲಿ ಎಸ್‌ಐಆರ್ ಶೇ. 54.41 ಡಿಜಿಟಲೀಕರಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ವಿಧಾನಸಭಾ ಕ್ಷೇತ್ರದಲ್ಲಿ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (ಎಸ್ಐಆರ್) ಚುರುಕುಗೊಂಡಿದ್ದು, ಇದುವರೆಗೆ 1,11,423 ಎನ್ಯೂಮರೇಷನ್ ಫಾರ್ಮ್‌ಗಳನ್ನು ಡಿಜಿಟಲೀಕರಣಗೊಳಿಸಲಾಗಿದ್ದು, ಶೇ.54.41 ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ಚುನಾವಣಾ ನೋಂದಣಿ ಅಧಿಕಾರಿ ರಂಜಿತ್ ಕುಮಾರ್ ತಿಳಿಸಿದರು.

ತಾಲ್ಲೂಕು ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಒಟ್ಟು 2,04,786 ಮತದಾರರಿದ್ದು, ಅವರಿಗಾಗಿ 270 ಮತಗಟ್ಟೆಗಳನ್ನು ಗುರುತಿಸಲಾಗಿದೆ. ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿಯನ್ನು ಸಂಪೂರ್ಣವಾಗಿ ನವೀಕರಿಸುವ ಕಾರ್ಯ ನಡೆಯುತ್ತಿದ್ದು, ಜುಲೈ 20ರೊಳಗೆ ಶೇ.100 ಡಿಜಿಟಲೀಕರಣ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ ಎಂದು ಹೇಳಿದರು. ಪರಿಷ್ಕರಣೆ ವೇಳೆ ಹಲವು ಮಹತ್ವದ ಅಂಶಗಳು ಬೆಳಕಿಗೆ ಬಂದಿದ್ದು, ಪರಿಶೀಲನೆ ಸಂದರ್ಭದಲ್ಲಿ 421 ಮಂದಿ ಗೈರು ಎಂದು ಗುರುತಿಸಲಾಗಿದೆ. 1,914 ಜನರು ಸ್ಥಳಾಂತರಗೊಂಡಿರುವುದು ದಾಖಲಾಗಿದ್ದು, 3,387 ಜನರು ಮೃತಪಟ್ಟಿದ್ದಾರೆ. ಈ ಮಾಹಿತಿಗಳನ್ನು ಚುನಾವಣಾ ಆಯೋಗದ ನಿಯಮಾನುಸಾರ ಮತದಾರರ ಪಟ್ಟಿಯಲ್ಲಿ ಪರಿಷ್ಕರಿಸಲಾಗುತ್ತಿದೆ ಎಂದು ತಿಳಿಸಿದರು. ಬಿಎಲ್ಒ ಮನೆಗಳಿಗೆ ಭೇಟಿ ನೀಡಿ ಅರ್ಜಿ ವಿತರಿಸದಿದ್ದರೆ ಅಥವಾ ಭರ್ತಿ ಮಾಡುವಲ್ಲಿ ತೊಂದರೆ ಎದುರಾದರೆ ಸಾರ್ವಜನಿಕರು ನೇರವಾಗಿ ಸಹಾಯಕ ಚುನಾವಣಾ ನೋಂದಣಿ ಅಧಿಕಾರಿ (ಎಇಆರ್ಒ) ಅಥವಾ ಚುನಾವಣಾ ನೋಂದಣಿ ಅಧಿಕಾರಿ (ಇಆರ್ಒ) ಅವರನ್ನು ಸಂಪರ್ಕಿಸಬೇಕು. ದೂರು ಬಂದ ತಕ್ಷಣ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಪರಿಹರಿಸುವ ಕ್ರಮ ಕೈಗೊಳ್ಳಲಾಗುವುದೆಂದು ಭರವಸೆ ನೀಡಿದರು.

# ಟ್ರ್ಯಾಕ್ಟರ್ ಡಿಕ್ಕಿಯಾಗಿ ಬೈಕ್ ಸವಾರ ಸಾವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಟ್ರ್ಯಾಕ್ಟರ್ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟು ಹಿಂಬದಿ ಕುಳಿತಿದ್ದ ಯುವಕ ಗಂಭೀರ ಗಾಯಗೊಂಡಿರುವ ಘಟನೆ ಬೇಲೂರು-ಚಿಕ್ಕಮಗಳೂರು ರಸ್ತೆಯ ಭಾರತ್ ಕನ್ವೆನ್ಷನ್ ಹಾಲ್ ಸಮೀಪ ನಡೆದಿದೆ.

ಹುಲಗುಂಡಿ ಗ್ರಾಮದ ಹೆಚ್.ಎಲ್. ರವಿ (24) ಮೃತ ಯುವಕ. ಸಂಬಂಧಿ ಕಾರ್ತಿಕ್‌ನನ್ನು ಬೈಕ್‌ನ ಹಿಂಬದಿ ಕೂರಿಸಿಕೊಂಡು ಹೊನ್ನೇನಹಳ್ಳಿ ಕಾವಲಿನಿಂದ ಗ್ರಾಮಕ್ಕೆ ವಾಪಾಸ್ಸಾಗುತ್ತಿದ್ದಾಗ ಬೇಲೂರು ಕಡೆಯಿಂದ ವೇಗವಾಗಿ ಬಂದ ಟ್ರ್ಯಾಕ್ಟರ್ ಡಿಕ್ಕಿಯಾಗಿದೆ. ಚಾಲಕನ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣ ಎನ್ನಲಾಗಿದೆ. ಗಾಯಾಳು ಕಾರ್ತಿಕ್‌ನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಟ್ರ್ಯಾಕ್ಟರ್ ಚಾಲಕ ಸ್ಥಳದಿಂದ ಕಾಲ್ಕಿತ್ತಿದ್ದಾನೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಇತಿಹಾಸದಲ್ಲಿ ಈ ದಿನ

## ಜುಲೈ-15

1099: ಮೊದಲ ಕ್ರೂಸೇಡ್ ವೇಳೆ ಕ್ರೈಸ್ತ ಸೈನಿಕರು ಜೆರುಸಲೇಂ ನಗರವನ್ನು ವಶಪಡಿಸಿಕೊಂಡರು.

1903: ಅಮೆರಿಕದ ವಾಹನ ತಯಾರಿಕಾ ಸಂಸ್ಥೆ ಫೋರ್ಡ್ ಮೋಟಾರ್ ಕಂಪನಿ ತನ್ನ ಮೊದಲ ಕಾರನ್ನು ಗ್ರಾಹಕರಿಗೆ ಮಾರಾಟ ಮಾಡಿತು.

1997: ಇಟಾಲಿಯ ಖ್ಯಾತ ಫ್ಯಾಷನ್ ವಿನ್ಯಾಸಗಾರ ಜಿಯಾನಿ ವರ್ಸಾಚೆ ಹತ್ಯೆಯಾದರು.

2011: ಭಾರತದಲ್ಲಿ ಜನಗಣತಿ2011ರ ತಾತ್ಕಾಲಿಕ ಅಂಕಿ ಅಂಶಗಳನ್ನು ಬಿಡುಗಡೆ ಮಾಡಲಾಯಿತು.

### ಜನನ

1606: ವಿಶ್ವಪ್ರಸಿದ್ಧ ಚಿತ್ರಕಾರ ರೆಂಬ್ರಾಂಟ್ ವಾನ್ ರೈನ್

1955: ಭಾರತದ ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್

1910 ಸಮಾಜಸೇವಕಿ ಮತ್ತು ಶಿಕ್ಷಣತಜ್ಞೆ ದುರ್ಗಾಬಾಯಿ ದೇಶಮುಖ್

### ನಿಧನ

1904: ರಷ್ಯಾದ ಕಥೆಗಾರ ಮತ್ತು ನಾಟಕಕಾರ ಆಂಟನ್ ಚೆಖೊವ್

# ಮೋಣು - 5

**ಗ್ರಾಮಾಯಣ-21**

**ಧನಂಜಯ ಜೀವಾಳ ಬಿ.ಕೆ.**



ಪೇಟೆಯಲ್ಲಿ ತನ್ನ ಪಟಾಲಂನ ಮೀಟಿಂಗ್ ಸ್ಥಳವಾದ ಓಕೆ ಅಂಗಡಿ ಬಳಿ ಗುಂಪು ಸೇರಿಸತೊಡಗಿದ. ಮೂರು ಆಟೋಗಳನ್ನು ಬಾಡಿಗೆಗೆ ತೆಗೆದುಕೊಂಡ ಮಂಜಯ್ಯ, ತನ್ನ ತರಲೆ ಸೈನ್ಯವನ್ನು ಗದ್ದೆ ಏರಿಯ ಮೇಲೆ ನಿಲ್ಲಿಸಿಕೊಂಡು ಮೋಣುವನ್ನು ಕರೆತರಲು ತನ್ನ ಛೇಲಾ ಒಬ್ಬನನ್ನು ಕಳುಹಿಸಿದ. ಮೊದಲೇ ಮುಂದೇನೆಂದು ಕಂಗಾಲಾಗಿದ್ದ ಮೋಣು ಈ ಗುಂಪನ್ನು ನೋಡಿ ಭೂಮಿಗಿಳಿದು ಹೋದ. ಮೋಣುವನ್ನು ಸುತ್ತುವರೆದ ಗುಂಪು ಬೆದರಿಕೆ, ಒತ್ತಡ ಮುಂತಾಗಿ ಟಾರ್ಚರ್ ಮಾಡಿ ಕಡೆಗೆ ಏಳು ಸಾವಿರಕ್ಕೆ ಒಪ್ಪುವಂತೆ ತಾಕೀತು ಮಾಡಿದರು. ಮೋಣುವಿನ ಮಗಳನ್ನು ಹೊರುವುದಾಗಿ ಎಚ್ಚರಿಕೆ ನೀಡಿದ್ದೂ ಅಲ್ಲದೇ, ಮೋಣುವನ್ನು ಸಹ ಪತ್ತೆಯಿಲ್ಲದಂತೆ ಕಾಡಿನಲ್ಲಿ ಗುಂಡಿ ತೆಗೆದು ಹೂಳುವುದಕ್ಕೂ ಸಿದ್ಧರೆಂದು ಹೆದರಿಸಿದರು. ಯಾವುದೋ ಊರಿನಿಂದ ಹೊಟ್ಟೆಪಾಡಿಗೆ ನಾಲ್ಕು ಕಾಸು ಸಂಪಾದನೆ ಮಾಡಲು ಬಂದಿದ್ದ ಮೋಣು ಬೇರೆ ದಾರಿಕಾಣದೇ ಅವರು ಕೇಳಿದ ಹಣಕ್ಕೆ ಒಪ್ಪಿದ. ಯಾವನಾದರೂ ವ್ಯಾಪಾರಿಯನ್ನು ಬರಲು ಹೇಳಿ, ನಾಳೆ ಅಡ್ವಾನ್ಸ್ ತೆಗೆದುಕೊಂಡು ತಮಗೆ ಬರಬೇಕಾದ ಹಣಕೊಟ್ಟರೆ ಮಾತ್ರ ಶುಂಠಿ ಕೀಳಲು ಬಿಡುವುದೆಂದು, ಇಲ್ಲವಾದಲ್ಲಿ ಮೋಣುವಿನ ಹೆಣ ನಾಯಿ-ನರಿ ಪಾಲಾಗುವುದೆಂದು ಎಚ್ಚರಿಸಿದರು.

ಮಂಜಯ್ಯನ ಗ್ಯಾಂಗ್ ಅತ್ತ ಹೋದ ಕೂಡಲೇ ಮೋಣು ಗುಡಿಸಲ ಹೊರಗಡೆಯೇ ಬಿಟ್ಟಿದ್ದ ಹವಾಯಿ ಚಪ್ಪಲಿಯನ್ನು ಮೆಟ್ಟಿಕೊಂಡು ಹೆಂಡತಿ-ಮಗಳಿಗೂ ಹೇಳದೇ ಸೀದಾ ಪೇಟೆಗೆ ಬಂದ. ಈ ಹಿಂದೆಯೇ ಅವನ ಬೆಳೆ ನೋಡಿದ್ದ ವ್ಯಾಪಾರಸ್ಥರನ್ನು ಕಂಡು ಅವತ್ತಿನ ರೇಟಿಗೆ ಮಾತು ಮಾಡಿಕೊಂಡು ಮೂವತ್ತು ಸಾವಿರ ರೂಪಾಯಿ ಅಡ್ವಾನ್ಸ್ ಹಣ ತಂದು ಸೀದಾ ಮಂಜಯ್ಯನ ಮನೆಗೇ ಹೋಗಿ ತಲುಪಿಸಿ ಉಳಿದದ್ದನ್ನು ಕೊನೆಯಲ್ಲಿ ಲೆಕ್ಕಾಚಾರ ಮಾಡುವುದಾಗಿ ತಿಳಿಸಿದ.

ಸೀದಾ ಗದ್ದೆಯ ಬದುವೆಡೆ ಇದ್ದ ಗುಡಿಸಲಿಗೆ ಬಂದು ಇನ್ನು ಹದಿನೈದು ದಿನದೊಳಗೆ ಪೇಟೆಯ ನಾರಾಯಣ ಪೂಜಾರಿ ಶುಂಠಿ ಕೀಳಿಸಲು ಜನ ಕರೆತರುತ್ತಾನೆ ಎಂದೂ, ಸಾವಿರದ ಐನೂರ ಐವತ್ತಕ್ಕೆ ರೇಟ್ ಫಿಕ್ಸ್ ಮಾಡಿಕೊಂಡು ಬಂದುದ್ದಾಗಿ ಹೆಂಡತಿಗೆ ತಿಳಿಸಿದ. ಎರಡು ಸಾವಿರ ಮೂಟೆ ಬೆಳೆ ಬರಬಹುದೆಂದೂ, ತನ್ನ ಹಳೆಯ ಸಾಲವನ್ನೆಲ್ಲ ತೀರಿಸಿ ಬಡಗರದಲ್ಲೇ ಮನೆಯೊಂದನ್ನು ಖರೀದಿಸಿ ಮುಂದಿನ ವರ್ಷದೊಳಗೆ ಮಗಳ ಮದುವೆಯನ್ನು ಮಾಡಲು ಆಗಬಹುದೆಂದು ಹೆಂಡತಿಗೆ ಹೇಳಿದ. ಮಾರನೇ ದಿನ ಬೆಳಿಗ್ಗೆ ನಾರಾಯಣ ಪೂಜಾರಿ ಮೋಣುವಿನ ಗದ್ದೆಗೆ ಬಂದು ಒಂದು ಸುತ್ತುಹಾಕಿ ಅಲ್ಲಲ್ಲಿ ಮಡಿಯನ್ನು ಕೆದಕಿ ಶುಂಠಿಯ ಕುಶಲೋಪರಿ ಪರಿಶೀಲಿಸಿದ. ಅಲ್ಲಲ್ಲಿ ಯಾಕೋ ಗೆಡ್ಡೆಗಳು ಕಪ್ಪು ಬಣ್ಣಕ್ಕೆ ತಿರುಗುವಂತೆ ಕಾಣುತ್ತಿದ್ದವು. ಮೋಣುವಿನ ಎದೆ ದಸಕ್ಕೆಂದಿತ್ತು. ಪೂಜಾರಿ ಪ್ರಶ್ನಾರ್ಥವಾಗಿ ಮೋಣುವಿನೆಡೆಗೆ ನೋಡಿದ. ಏನೂ ಯೋಚನೆ ಮಾಡಬೇಡಿ, ಈ ಸುತ್ತಲಿನ ಎಲ್ಲಾ ಊರಿನ ಬೆಳೆಯಲ್ಲೇ ನನ್ನದೇ ನಂಬರ್ ವನ್. ಸುತ್ತಾಮುತ್ತಾ ಎಲ್ಲರ ಬೆಳೆ ಕೇಡಾಗಿದ್ದರೆ, ಕೆಲವರದ್ದೇ ಮಾತ್ರ ಚೆನ್ನಾಗಿರೋದು. ಎಲ್ಲೋ ಒಂದೆರಡು, ಕೀಳೋದು ತಡವಾಯಿತ್ತಲ್ಲ ಹಾಗಾಗಿ ಬಣ್ಣ ಬದಲಾಗಿರಬಹುದು ಎಂದ. ಪೂಜಾರಿ ಗೊಣಗುತ್ತಲೇ ಪೇಟೆಗೆ ಹೋದ. ಮಾರನೇ ದಿನದಿಂದಲೇ ಮಾರುಕಟ್ಟೆ ಇಳಿಮುಖವಾಗಬೇಕೇ? ಆ! ಆ! ಎಂದು ನೋಡುತ್ತಿರುವಂತೆಯೇ ಬೆಲೆ ಸಾವಿರದನೂರಕ್ಕೆ ಬಂದಿಳಿಯಬೇಕೇ? ಪೂಜಾರಿ ತಲೆ ಮೇಲೆ ಕೈಹೊತ್ತು ಕೂತ. ಬೇಗ ಕಿತ್ತು ತುಂಬಿಸುವಂತೆ ಗೋಗರೆದ ಮೋಣುವಿನ ಒತ್ತಾಯಕ್ಕೆ ಮಣಿದು ಇಪ್ಪತ್ತು ಜನರನ್ನು ಶುಂಠಿ ಕೀಳಲು ಕರೆತಂದು ಬಿಟ್ಟ. ಕಿತ್ತು ಕಿತ್ತು ಹೊರ ತೆಗೆದಂತೆ ಮೋಣು ಮತ್ತು ಪೂಜಾರಿ ಮೂರ್ಛೆ ಹೋಗುವುದೊಂದೇ ಬಾಕಿ. ಒಂದೊಂದು ಮಡಿಯಲ್ಲೂ ಹೆಚ್ಚೆಂದರೆ ಒಂದರಿಂದ ಎರಡು ಕೆ.ಜಿ. ಮಾತ್ರ ಚೆನ್ನಾಗಿರುವ ಶುಂಠಿ ಸಿಗತೊಡಗಿತು. ಯಾವುದೋ ಮಹಾಮಾರಿ ರೋಗ ಮೋಣುವಿನ ಕನಸನ್ನು ನಿರ್ದಾಕ್ಷಿಣ್ಯವಾಗಿ ಹೊಸಕಿ ಹಾಕಿತ್ತು. ಎರಡು ಸಾವಿರ ಮೂಟೆ ಇರಲಿ, ರಾಶಿ ಕೊನೆಯಾದಾಗ ಇನ್ನೂರು ಮೂಟೆಯೂ ಸಿಗಲಿಲ್ಲ. ಮೋಣುವಿನ ಹೆಂಡತಿ ಮತ್ತು ಮಗಳು ನಿಂತಲ್ಲೇ ಕಣ್ಣೀರಿಳಿಸುತ್ತಿದ್ದರು. ಮೋಣು ಬಿಟ್ಟಗಣ್ಣಿನಲ್ಲೇ ಅಗೆದು ಬಗೆದು ಬರಿದಾಗಿದ್ದ ಗದ್ದೆಯನ್ನೇ ನಿರ್ಭಾವುಕನಾಗಿ ನೋಡುತ್ತಿದ್ದ. ಈ ಮೊದಲೇ ತನ್ನ ಗೂಂಡಾಗಿರಿಯಿಂದ ಲಾಭ ಮಾಡಿಕೊಂಡಿದ್ದ ಮಂಜಯ್ಯ ಕೊನೆಯ ಲೆಕ್ಕಾ ಚುಕ್ತಾಮಾಡಲು ಬೆಳಿಗ್ಗೆ ಬಂದು ಅಲ್ಲಿ ಬಿದ್ದಿದ್ದ ರಾಶಿಯನ್ನು ನೋಡಿ ಮರುಮಾತನಾಡದೇ ಎಲ್ಲಾ ನಿಮ್ಮ ಕರ್ಮ ಎಂದು ನಿರ್ಗಮಿಸಿದ. ಮೋಣು ಅವನ ಹೆಂಡತಿ ಮಗಳೊಂದಿಗೆ ಬೀಜ, ಗೊಬ್ಬರ, ಔಷಧಿಯವರ ಬಳಿ ಮಾಡಿದ್ದ ಸಾಲವನು ತೀರಿಸಲೂ ಸಾಧ್ಯವಾಗದೇ ಬಿಕಾರಿಯಂತೆ ಅವರಿವರ ತೋಟದಲ್ಲಿ ಕೂಲಿ ಮಾಡುತ್ತಾ ರಸ್ತೆ ಬದಿಯ ತಗಡಿನ ಶೆಡ್ಡಿನಲ್ಲಿ ಕಾಲ ಹಾಕುತ್ತಾ ಇದ್ದರೆ, ಅವತ್ತು ಊರುಬಿಟ್ಟ ಪೂಜಾರಿ ಇವತ್ತಿನವರೆಗೂ ಯಾರಿಗೂ ಕಾಣಿಸಿಕೊಂಡಿಲ್ಲ. (ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248